ಪಿ ಡಬ್ಲೂಃ 1 ಅಸಲು ದಾವಾ ಸಂಖ್ಯೆಃ 47/2020

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ರವರ ನ್ಯಾಯಾಲಯ, ಗುಬ್ಬಿ.**

**ದಿನಾಂಕಃ 10.08.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

| ಸತ್ಯ ಪ್ರತಿಜ್ಞೆಯ ಮೇರೆಗೆ |
|---|

**ಪಾಟೀ ಸವಾಲುಃ ಪ್ರತಿವಾದಿಯ ಪರ ವಕೀಲರಾದ ಶ್ರೀಃ ಆರ್ ವಿ ರವರಿಂದಃ**

ದಾವಾ ಅನುಸೂಚಿ ಸ್ವತ್ತು ಮೂಲತಃ ಶಿವಣ್ಣ ರವರಿಗೆ ಮಂಜೂರಾದ ಜಮೀನು ಎಂದರೆ ನನಗೆ ಗೊತ್ತಿಲ್ಲ. ದಾವಾ ಅನುಸೂಚಿ ಸ್ವತ್ತಿನ ಚಕ್ಕುಬಂದಿ ಗೊತ್ತಾ ಎಂದರೆ ಪೂರ್ವಕ್ಕೆ ಪ್ರತಿವಾದಿ ರತ್ನಮ್ಮ ರವರ ಜಮೀನು, ಪಶ್ಚಿಮಕ್ಕೆಃ ಸರ್ಕಾರಿ ಜಮೀನು, ಉತ್ತರಕ್ಕೆಃ ಸಿದ್ದಯ್ಯ ರವರ ಜಮೀನು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಬಸಪ್ಪ ರವರ ಜಮೀನು ಎಂದು ನುಡಿಯುತ್ತಾರೆ. ದಕ್ಷಿಣಕೆಃ ಶಿವಕುಮಾರ್ ಎಂದರೆ ಸರಿ. ಸ.ನಂ.28/1 ರಲ್ಲಿ 5 ಎಕರೆ ಜಮೀನು ಸಿದ್ದರಾಮಯ್ಯ ಬಿನ್ ಗುರುಸಿದ್ದಪ್ಪ ರವರಿಗೆ ಮಂಜೂರಾಗಿರುತ್ತದೆ ಎಂದರೆ ಸರಿ. ಸ.ನಂ.28/2 ರಲ್ಲಿ 6 ಎಕರೆ ಜಮೀನು ಶಿವಣ್ಣ ಬಿನ್ ಹುಚ್ಚವೀರಯ್ಯ ರವರಿಗೆ ಮಂಜೂರಾಗಿತ್ತು ಎಂದರೆ ಸರಿ. ನಿಮ್ಮ ಜಮೀನಿನ ಉತ್ತರಕ್ಕೆ ರಸ್ತೆ ಇದ್ದು, ರಸ್ತೆಯ ಉತ್ತರಕ್ಕೆ ಸಿದ್ದಯ್ಯ ರವರ ಜಮೀನು ಇರುತ್ತದೆ ಎಂದರೆ ಸಾಕ್ಷಿಯು ರಸ್ತೆ ಇರುವುದಿಲ್ಲ, ಕಾಲುದಾರಿ ಬಿಟ್ಟುಕೊಂಡಿದ್ದೆವು ಎಂದು ನುಡಿಯುತ್ತಾರೆ. ನಿಮ್ಮ ಮತ್ತು ಪ್ರತಿವಾದಿಯ ಜಮೀನಿನ ಉತ್ತರ ದಿಕ್ಕಿಗೆ ಊರಿನಿಂದ forest ವರೆಗೆ ಕಾಲುದಾರಿ ಇರುತ್ತದೆ ಎಂದರೆ ಸರಿ. ಪ್ರತಿವಾದಿಯ ಜಮೀನಿನ ಪೂರ್ವಕ್ಕೆ ಕಲ್ಲಮ್ಮ ಕೋಂ ಶಿವನಂಜಪ್ಪ ರವರ ಜಮೀನು ಇರುತ್ತದೆ ಎಂದರೆ ಸರಿ. ಪ್ರತಿವಾದಿಯ ಜಮೀನಿನ ದಕ್ಷಿಣಕ್ಕೆ ವಕೀಲರಾದ ಶಂಕರ್ ಮತ್ತು ಮಧು ರವರ ಜಮೀನು ಇರುತ್ತದೆ ಎಂದರೆ ಸರಿ. ಪ್ರತಿವಾದಿಯ ಜಮೀನಿನ ಉತ್ತರಕ್ಕೆ ಪರಮೇಶ್ವರಯ್ಯ, ಶಂಭಣ್ಣ, ರಂಗಣ್ಣ ಮತ್ತು ಜಯಮ್ಮ ರವರ ಜಮೀನು ಇರುತ್ತದೆ ಎಂದರೆ 5 ಎಕರೆ ಜಮೀನಿನ ಕಡೆ ಇರುತ್ತಾರೆ ನಮ್ಮ 6 ಎಕರೆ ಜಮೀನಿನ ಕಡೆ ಇರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ 5 ಎಕರೆ ಜಮೀನು ಸಿದ್ದರಾಮಯ್ಯ ರವರ ಮಕ್ಕಳು ಮತ್ತು ಮೊಮ್ಮಕ್ಕಳ ಜಮೀನು ಎಂದರೆ ನನಗೆ ಗೊತ್ತಿಲ್ಲ. ನಿಮ್ಮ ಮಾವನಿಗೆ ಮಂಜೂರಾಗಿದ್ದ 6 ಎಕರೆ ಜಮೀನಿನ ಪೈಕಿ ನಿಮ್ಮ ಗಂಡನಾದ ಗಂಗಣ್ಣ ಮತ್ತು ಅವರ ಅಣ್ಣನಾದ ಶಿವಣ್ಣ ರವರು ತಲಾ 3 ಎಕರೆ

ಜಮೀನನ್ನು ಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿ. ಶಿವಣ್ಣ ರವರಿಗೆ ಬಂದಿದ್ದ 3 ಎಕರೆ ಜಮೀನು ಅವರು ತೀರಿಕೊಂಡ ನಂತರ ಅವರ ಹೆಂಡತಿಯಾದ ಪುಟ್ಟನಂಜಮ್ಮ ರವರ ಹೆಸರಿಗೆ ಬಂದಿರುತ್ತದೆ ಎಂದರೆ ಸರಿ. ಪುಟ್ಟನಂಜಮ್ಮ ರವರು ಸದರಿ 3 ಎಕರೆ ಜಮೀನನ್ನು ಅವರ ತಮ್ಮನಾದ ಶಿವಕುಮಾರ್ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಅನುಭವದಲ್ಲಿ ಅವರೇ ಇದ್ದಾರೆ ಎಂದು ನುಡಿಯುತ್ತಾರೆ. ಗಂಗಣ್ಣ ರವರ ಮೊದಲನೇ ಹೆಂಡತಿಗೆ ಮಕ್ಕಳಿಲ್ಲ ಎನ್ನುವ ಕಾರಣಕ್ಕೆ ಅವರು ನಿಮ್ಮನ್ನು ಮದುವೆಯಾಗಿದ್ದರು ಎಂದರೆ ಸರಿ. ನಿಮಗೆ ಮೂರು ಜನ ಮಕ್ಕಳು ಎಂದರೆ ಸರಿ. ಗಂಗಣ್ಣ ರವರ ಮೊದಲನೇ ಹೆಂಡತಿಯ ಹೆಸರು ಏನು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಮೊದಲನೇ ಹೆಂಡತಿಯ ವಿಚಾರವೇ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಗಂಗಣ್ಣ ರವರ ಮೊದಲನೇ ಹೆಂಡತಿ ಬದುಕಿದ್ದಾರೆ ಎಂದರೆ ಸಾಕ್ಷಿ ಬದುಕಿಲ್ಲ ಎಂದು ನುಡಿಯುತ್ತಾರೆ. ಗಂಗಣ್ಣ ರವರು ತೀರಿಕೊಂಡ ನಂತರ ಅವರ 3 ಎಕರೆ ಆಸ್ತಿಯನ್ನು ನಿಮ್ಮ ಹೆಸರಿಗೆ ಮಾಡಿಸಿಕೊಂಡಿದ್ದೀರಿ ಎಂದರೆ ಸರಿ. ನಿಮ್ಮ 3 ಎಕರೆ ಜಮೀನಿನಲ್ಲಿ ಎಷ್ಟು ತೆಂಗಿನ ಗಿಡ ಮತ್ತು ಎಷ್ಟು ಅಡಿಕೆ ಗಿಡಗಳು ಇರುತ್ತವೆ ಎಂದರೆ ಸಾಕ್ಷಿಯು 1400 ಅಡಿಕೆ ಗಿಡಗಳು, 100 ತೆಂಗಿನ ಗಿಡಗಳು ಮತ್ತು 3 ಹುಣಸೆ ಗಿಡಗಳು ಇರುತ್ತವೆ ಎಂದು ನುಡಿಯುತ್ತಾರೆ. 3 ಹುಣಸೆ ಗಿಡಗಳು ದಾವಾ ಅನುಸೂಚಿ ಸ್ವತ್ತಿನಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ, ಆ ಮೂರು ಹುಣಸೆ ಗಿಡಗಳು ಪ್ರತಿವಾದಿಯ ಜಮೀನಿನಲ್ಲಿ ಇರುತ್ತವೆ ಎಂದರೆ ಸರಿಯಲ್ಲ.

2. ಸಿದ್ದಗಂಗಮ್ಮ ಮತ್ತು ಪುಟ್ಟನಂಜಮ್ಮ ರವರ ನಡುವೆ ತಹಸೀಲ್ದಾರ್ ನ್ಯಾಯಾಲಯದಲ್ಲಿ ಒಂದು ಪ್ರಕರಣ ನಡೆಯುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ತಹಸೀಲ್ದಾರ್ ರವರ ನ್ಯಾಯಾಲಯದ ಆದೇಶದಂತೆ ಸರ್ವೆಯರ್ ರವರು ಸ್ಥಳಕ್ಕೆ ಬಂದು ಅಲ್ಲಿ ಅಳತೆ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯ ತಾತನಾದ ಸಿದ್ದರಾಮಯ್ಯ ರವರಿಗೆ ಸಿದ್ದಗಂಗಮ್ಮ, ಈರಮ್ಮ ಮತ್ತು ಮಹದೇವಮ್ಮ ಎಂಬ ಮೂರು ಜನ ಹೆಣ್ಣು ಮಕ್ಕಳು ಎಂದರೆ ಸರಿ. ಅದರಲ್ಲಿ ಸಿದ್ದಗಂಗಮ್ಮ ರವರು ತೀರಿಕೊಂಡಿದ್ದು, ರತ್ನಮ್ಮ, ಸಿದ್ದರಾಮಯ್ಯ, ನಾಗರಾಜಯ್ಯ ಮತ್ತು ಸೋಮಶೇಖರಯ್ಯ ಎಂಬ 4 ಜನ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಈರಮ್ಮ ಮತ್ತು ಮಹದೇವಮ್ಮ ರವರನ್ನು ಬೇರೆ ಊರಿಗೆ ಕೊಟ್ಟು ಮದುವೆ ಮಾಡಿದ್ದಾರೆ

ಎಂದರೆ ನನಗೆ ಗೊತ್ತಿಲ್ಲ. ರತ್ನಮ್ಮ ರವರನ್ನು ತುಮಕೂರಿನ ಅರಕೆರೆಗೆ ಕೊಟ್ಟು ಮದುವೆ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ರತ್ನಮ್ಮ ರವರು ಅರಕೆರೆ ಗ್ರಾಮದಲ್ಲಿಯೇ ವಾಸವಾಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಿಮ್ಮ ಜಮೀನಿನ ಪಕ್ಕ ಇರುವ ಪ್ರತಿವಾದಿಯ ಜಮೀನಿನಲ್ಲಿ ಈಗ ಯಾರು ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ಮೊದಲು ನನಗೆ ಗೊತ್ತಿಲ್ಲ ಎಂದು ಉತ್ತರಿಸಿ, ಈಗ ವ್ಯವಸಾಯ ಮಾಡುತ್ತಿಲ್ಲ ಹಾಗೆಯೇ ಬಿಟ್ಟಿದ್ದಾರೆ ಎಂದು ನುಡಿಯುತ್ತಾರೆ.

3. ಸ.ನಂ.28/1 ರಲ್ಲಿ ಒಟ್ಟು ವಿಸ್ತೀರ್ಣ 20 ಎಕರೆ 18 ಗುಂಟೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅದರಲ್ಲಿ 5 ಎಕರೆ 30 ಗುಂಟೆ ಕರಾಬು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸ.ನಂ.28/1 ರ ಆಸ್ತಿಯನ್ನು ಯಾವಾಗಲೂ ಸರ್ವೆಯರ್ ರವರು ಬಂದು ಅಳತೆ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ನೀವೆನಾದರೂ ನಿಮ್ಮ 3 ಎಕರೆ ಆಸ್ತಿಯನ್ನು ಯಾವಾಗಲಾದರೂ ಅಳತೆ ಮಾಡಿಸಿದ್ದಿರಾ ಎಂದರೆ ಮಾಡಿಸಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ಪಕ್ಕದ ಶಿವಕುಮಾರಯ್ಯ ರವರು ತಮ್ಮ ಆಸ್ತಿಯನ್ನು ಅಳತೆ ಮಾಡಿಸಿದ್ದರು ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈಗ ಎಲ್ಲಾ ಜಮೀನನ್ನು ಒಟ್ಟುಗೂಡಿಸಿ ಒಂದೇ ಪಹಣಿ ಬರುತ್ತಿದೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ನಮ್ಮ 3 ಎಕರೆಗೆ ಬೇರೆ ಪಹಣಿ ಬರುತ್ತಿದೆ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲು ಸಮಯ ಕೋರಿದ್ದು ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ,**
**ಗುಬ್ಬಿ**

**Pw.1 is present. Partly cross examined.**

**Prays time.**

**For further cross of Pw.1.**

**Call on.12.10.2026.**